

ಫ್ಯಾಷನ್ ಪ್ರಪಂಚದಲ್ಲಿ ಕಾಲ್ಗೆಜ್ಜೆ ಸಖತ್ ಸದ್ದು ಮಾಡುತ್ತಿದೆ. ಸಾಂಪ್ರದಾಯಿಕ ನಾಟ್ಯ ಗೆಜ್ಜೆಯಿಂದ ಹಿಡಿದು ಆಧುನಿಕ ಬೀಡ್ಸ್‌ನಿಂದ ಮಾಡಿದ ಕಾಲ್ಗೆಜ್ಜೆಗಳೂ ಇಂದು ಟ್ರೆಂಡ್ ಸೆಟರ್ ಆಗಿವೆ. ಹೆಣ್ಣಿನ ಹನ್ನೆರಡು ಅಲಂಕಾರಗಳಲ್ಲಿ ಒಂದಾಗಿ ಸೇರಿರುವ ಈ ಕಾಲ್ಗೆಜ್ಜೆ ನಾದ ಅನಾದಿ ಕಾಲದಿಂದಲೂ ಬಂದಿದ್ದು, ಇಂದಿನ ಆಧುನಿಕ ಫ್ಯಾಷನ್‌ನೊಂದಿಗೂ ಒಗ್ಗಿಕೊಂಡಿದೆ.

■ ಉಮಾ ಅನಂತ್

# ಘಲ್ಲು ಘಲ್ಲೆನುತಾ ಗೆಜ್ಜೆ!

‘ಮನಸೋತೆ ಕಣೆ ನಿನ್ನ ಕಾಲ್ಗೆಜ್ಜೆಯ ಪಾದಕೆ
ಮರುಳಾದೆ ನಿನ್ನ ಕಾಲ್ಗೆಜ್ಜೆ ನಾದಕೆ...’

ಕವಿ ಪವನ ಕೊಂಡಾಪುರೆ ಅವರು ಬರೆದ ಕವನದ ಸಾಲುಗಳಿವು. ತನ್ನ ಮನದನ್ನೆಯ ಕಾಲ್ಗೆಜ್ಜೆ ನಾದ ಕೇಳಿ, ಅದರ ಸೊಬಗು ಕಂಡು ಕವಿಯ ಕಲ್ಪನೆ ಪದಪುಂಜಗಳಲ್ಲಿ ಹಿಡಿದಿಟ್ಟಾಗ ರೂಪುಗೊಂಡ ಈ ಕವನ ಸಾಲುಗಳು ಕಾಲ್ಗೆಜ್ಜೆಯ ಮಹತ್ವವನ್ನು ವರ್ಣಿಸುತ್ತದೆ. ಕಾಲ್ಗೆಜ್ಜೆ ಮಹತ್ವವನ್ನು ಸಾರುವ ಅನೇಕ ಹಾಡುಗಳನ್ನು ಕವಿಗಳು ಬರೆದಿದ್ದಾರೆ. ಫ್ಯಾಷನ್ ಪ್ರಪಂಚದಲ್ಲಂತೂ ಕಾಲ್ಗೆಜ್ಜೆ ಟ್ರೆಂಡ್ ಸೆಟರ್ ಆಗಿದೆ. ಭರತನಾಟ್ಯ, ಕಥಕ್‌ಗಳಂತಹ ನೃತ್ಯ ಪ್ರಕಾರಗಳಲ್ಲಿ ಕಾಲ್ಗೆಜ್ಜೆಗಳಿಲ್ಲದೆ ನೃತ್ಯವೇ ಅಪೂರ್ಣ ಎನ್ನುವಷ್ಟರ ಮಟ್ಟಿಗೆ ಗೆಜ್ಜೆಗಳು ಹಾಸುಹೊಕ್ಕಾಗಿವೆ. ನೃತ್ಯದಲ್ಲಿ ಬಳಸುವ ಗೆಜ್ಜೆಗೆ ಘುಂಗುರು ಎಂದೂ ಕರೆಯುವರು. ಕೆಲವೊಮ್ಮೆ ವೆಲ್ವೆಟ್ ಬಟ್ಟೆಗೆ ಗೆಜ್ಜೆಗಳನ್ನು ಹೊಲಿದು ಮಾಡಿದ ಕಾಲ್ಗೆಜ್ಜೆ ಬಳಸುವುದೂ ಭರತನಾಟ್ಯದಲ್ಲಿ ಕಾಣಬಹುದು.

ಟ್ರೆಂಡಿ ಗೆಜ್ಜೆಗಳು ಈಗ ಹೆಚ್ಚು ಸಪ್ಪಳ ಮಾಡುತ್ತಿದೆ. ಫ್ಯಾಷನ್ ಕಾಲ್ಗೆಜ್ಜೆಗಳು ಲಗ್ಗೆ ಇಟ್ಟಿವೆ. ಮಹಿಳೆಯರು ಗೆಜ್ಜೆ ಜೊತೆ ಭಾವನಾತ್ಮಕ ನಂಟು ಬೆಳೆಸಿಕೊಂಡಿದ್ದಾರೆ. ಈಗ ಮಣಿಗಳಿಂದ ಕೂಡಿದ ಗೆಜ್ಜೆ, ಬೀಡ್ಸ್‌ಗಳು, ಬಣ್ಣ ಬಣ್ಣದ ಹರಳುಗಳು, ಕುಂದನ್ ಮುಂತಾದವುಗಳಿಂದ ಮಾಡಿದ ಗೆಜ್ಜೆಗಳು ಬಂದಿದ್ದು ಘಲ್‌ಘಲ್ ನಾದದ ಬದಲಾಗಿ ನೋಡಲು ಮಾತ್ರ ಆಕರ್ಷಕ ಎನಿಸಿವೆ. ಸಿಂಪಲ್ ಗೆಜ್ಜೆ ಮಣಿಗಳ ಜೊತೆಗೆ ಗೆಜ್ಜೆ, ಕಾಲುಂಗುರ ಜೊತೆ ಹೊಂದಿಕೊಂಡ ‘ಟು ಇನ್ ವನ್ ಗೆಜ್ಜೆ’ ಕೂಡ ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ.

ಉಡುಪಿಗೆ ಮ್ಯಾಚಿಂಗ್ ಆಗುವ ದಾರದಲ್ಲಿ ಪೋಣಿಸಿದ ಮಣಿಗಳೂ ಈಗೀಗ ಜನಪ್ರಿಯ. ಭಾರವಿಲ್ಲದ, ಗೆಜ್ಜೆಗಳೇ ಇಲ್ಲದ ಕಾಲು ಚೈನ್ ಕೂಡ ಫ್ಯಾಷನ್ ಎನಿಸಿದೆ. ಇವೆಲ್ಲವೂ ಬರೀ ಸೀರೆ ಮಾತ್ರವಲ್ಲ, ಸ್ಕರ್ಟ್, ಜೀನ್ಸ್ ಪ್ಯಾಂಟ್ ತೊಟ್ಟಾಗಲೂ ಧರಿಸಿಕೊಳ್ಳುವಂತಿದೆ. ಅಲ್ಲದೆ ಈಗೀಗ ಒಂದೇ ಕಾಲಿಗೆ ಗೆಜ್ಜೆ ಹಾಕಿಕೊಳ್ಳುವುದೂ ಫ್ಯಾಷನ್‌ನ ಭಾಗವಾಗಿದೆ. ಕಾಲೇಜು ಹುಡುಗರೂ ಒಂದು ಕಾಲಿಗೆ ದಾರವನ್ನು ಕಟ್ಟಿಕೊಂಡೋ, ಕಾಲಂದುಗೆ ಧರಿಸಿಕೊಂಡೋ ಅಡ್ಡಾಡುವುದೂ